ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ,

ದೇವದುರ್ಗ.

**PCR No.1/2022**

**CW-3**

| | | |
|---|---|---|
| ಸಾಕ್ಷಿದಾರನ ಹೆಸರು | ಃ | ಹನುಮಂತಿ |
| ಗಂಡ | ಃ | ಹನುಮಂತ |
| ವಯಸ್ಸು | ಃ | 60 |
| ಉದ್ಯೋಗ | ಃ | ಒಕ್ಕಲುತನ |
| ವಾಸಸ್ಥಳ | ಃ | ಜಾನಮರಡಿ |
| ಪ್ರಮಾಣಿಕರಿಸಿದ ದಿನಾಂಕ ಃ | | **23.12.2025** |

---

<u>ಪ್ರಮಾಣಿಕೃತ ಹೇಳಿಕೆ</u>**:-**

ಪಿರ್ಯಾಧಿ ಬಸವರಾಜ ನನಗೆ ಮಗನಾಗಬೇಕು. ಈಗ 04 ವರ್ಷಗಳ ಹಿಂದೆ ಬೆಳಗಿನ 08:00 ಗಂಟೆಗೆ ಗಲಗ ಸೀಮೆಯಲ್ಲಿ ಇರುವ ನಮ್ಮ ಜಮೀನಿನಲ್ಲಿ ಮಲ್ಲಣ್ಣ ಟ್ರಾಕ್ಟರ್ ಮೂಲಕ ಟಿಲ್ಲರ್ ಹೋಡೆಯುತ್ತಿದ್ದಾಗ ಪಿರ್ಯಾಧಿ ಬಸವರಾಜ ಮರ ಕಡಿಯುತ್ತಿದ್ದು ಆಗ ಏಕಾಏಕಿ ಕೆ.ಬಿ ವಾಯರ್ ಹರಿದು ಬಸವರಾಜನಿಗೆ ಸುಟ್ಟ ಗಾಯಗಳು ಆಗಿರುತ್ತವೆ. ತಕ್ಷಣ ಬಸವರಾಜನ ಮಗನಿಗೆ ಮಲ್ಲಣ್ಣ ಪೋನ್ ಮಾಡಿದ್ದು ನಂತರ ಬಸವರಾಜನನ್ನು ರಾಯಚೂರು ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತೇವೆ. ಆಸ್ಪತ್ರೆಯಲ್ಲಿ ಅಂದಾಜು ಒಂದು ತಿಂಗಳ ವರೆಗೆ ಚಿಕಿತ್ಸೆ ಪಡೆದಿರುತ್ತಾನೆ. ಜಮೀನಿನಲ್ಲಿನ ವಿಧ್ಯುತ್ ಕಂಬಗಳಿಗೆ ಅಕಲಾದ ವಾಯರ್ ತುಂಬಾ ಹಳೆಯದಾಗಿದ್ದು ಸದರಿ ವಾಯರ್ ಹರಿದು ಬಿಳುವ ಸ್ಥಿತಿಯಲ್ಲಿ ಇದ್ದು ಸದರಿ ಅಂಶವನ್ನು ಕೆ.ಇ.ಬಿ ಯವರಿಗೆ ತಿಳಿಸಿದ್ದರು ಯಾವುದೇ ವಾಯರ್ ಬದಲಾವಣೆ ಮಾಡಿರಲಿಲ್ಲ. ಏಕಾಏಕಿ ವಾಯರ್ ಹರಿದು ಬಿದ್ದು ನನ್ನ ಮಗನಿಗೆ ಸುಟ್ಟಗಾಯಗಳು ಆಗಿರುತ್ತವೆ. ಠಾಣೆಗೆ ಹೋದರು ಪೊಲೀಸರು ನಮ್ಮ ದೂರನ್ನು ಪಡೆದಿರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಖ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ)

ಓ.ಹೇ.ಕೇ.ಸರಿ.ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ,

ದೇವದುರ್ಗ.